ದಿನಾಂಕ 21-09-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 5 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಸಿ.ಬಿ.ಕೆ. ವಕೀಲರಿಂದಃ**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಈ ಕೆಳಕಂಡಂತೆ ದಾಖಲೆಗಳನ್ನು ಹಾಜರಪಡಿಸುತ್ತಿದ್ದೇನೆ.

2. ಸಾಕ್ಷಿದಾರರ ವಿವಾಹ ಆಹ್ವಾನ ಪತ್ರಿಕೆಯನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು **ನಿಡಿ 1** ಎಂದು, ಎರಡು ಆಧಾರ್ ಕಾರ್ಡ್ ಗಳನ್ನು **ನಿಡಿ 2** ಮತ್ತು **ನಿಡಿ 3** ಎಂದು, 6 ಮತ್ತು 7 ನೇ ಪ್ರತಿವಾದಿಯ 3 ಶಾಲಾ ದಾಖಲಾತಿಯ ಯಥಾ ನಕಲುಗಳನ್ನು **ನಿಡಿ 4** ರಿಂದ **ನಿಡಿ 6** ಎಂದು, ಮೃತ 7 ನೇ ಪ್ರತಿವಾದಿಯ ಅಂಕಪಟ್ಟಿಗಳನ್ನು **ನಿಡಿ 7** ಮತ್ತು **ನಿಡಿ 8** ಎಂದು, 6 ನೇ ಪ್ರತಿವಾದಿಯ ಅಂಕಪಟ್ಟಿಯನ್ನು **ನಿಡಿ 9** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.                ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.                ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.